ವಿಷಯ : ಊಟದ ಬಳಕೆಯ ಎಣ್ಣೆಯ ಬೀಜದ ಬೆಳೆಯನ್ನು ಅಭಿವೃದ್ಧಿ ಪಡಿಸುವುದು.

ಪ್ರಶ್ನೆ : 106 (167) ಶ್ರೀ ಬಿ. ಆರ್ ಪಾಟೀಲ್ (ಆಳಂದ) .— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಇತ್ತೀಚಿನ ವರ್ಷಗಳಲ್ಲಿ ಗುಲ್ಬರ್ಗಜಿಲ್ಲೆ ಹಾಗೂ ಇತರ ಒಣ ಬೇಸಾಯ ಪ್ರದೇಶದಲ್ಲಿ ಊಟದ ಬಳಕೆಯ ಎಣ್ಣೆಕಾಳಿನ ಬೆಳೆಗಳು ಎಣ್ಣೆ ಬೀಜದ ಬೆಳೆಯು ಫಸಲು ವಿಫಲವಾಗಿ ಕಡಿಮೆಯಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಊಟದ ಬಳಕೆಯ ಎಣ್ಣೆ–ಬೀಜದ ಬೆಳೆಯ ಸುಧಾರಣೆಗಾಗಿ ಮತ್ತು ಎಣ್ಣೆ-ಬೀಜಗಳ ಹೆಚ್ಚಿನ ಉತ್ಪಾದನೆಗಾಗಿ ಒಳ್ಳೆಯ ತಳಿಯ ಬೀಜಗಳು ಮತ್ತು ಬೇಸಾಯ ಪದ್ಧತಿಯನ್ನು ಕಂಡುಹಿಡಿಯಲು ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಉತ್ತರ : ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು) .— ಅ) ಹೌದು.

ಆ) ಇಲ್ಲ. ರಾಯಚೂರಿನಲ್ಲಿ ಈಗಾಗಲೇ ಒಂದು ಎಣ್ಣೆ ಬೀಜಗಳ ಸಂಶೋಧನಾ ಸಂಸ್ಥೆ ಕೆಲಸ ಮಾಡುತ್ತಿದ್ದು ಎಣ್ಣೆಬೀಜಗಳ ಉತ್ಪಾದನೆಯನ್ನು ಹೆಚ್ಚಿಸಲು ಹೊಸ ತಳಿಗಳ ಅಭಿವೃದ್ಧಿ ಹಾಗೂ ಸುಧಾರಿತ ಬೇಸಾಯ ಪದ್ಧತಿಗಳ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ. ಗುಲ್ಬರ್ಗ ಜಿಲ್ಲೆಯೂ ಕೂಡ ರಾಯಚೂರು ವಿಭಾಗದ ಒಂದು ಭಾಗವಾಗಿದೆ.

ವಿಷಯ : ಬೆಳೆವಿಮೆ ಯೋಜನೆಯ ಸರ್ಕಾರದ ನೀತಿ.

ಪ್ರಶ್ನೆ : 117 (529) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ) .— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹಿಂದಿನ ಸರ್ಕಾರವು ಬೆಳೆವಿಮೆ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರಲು ಒಪ್ಪಿತ್ತೆ ;

ಆ) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಪ್ರಾಯೋಗಿಕ ಬೆಳೆವಿಮೆ ಯೋಜನೆಯನ್ನು ಜಾರಿಗೆ ತರಲಾಗಿದೆ ಮತ್ತು ಇದರ ಫಲಿತಾಂಶವೇನು ;

ಇ) ಸರ್ಕಾರವು ಬೆಳೆವಿಮೆ ಯೋಜನೆಯನ್ನು ರಾಜ್ಯದ ಎಲ್ಲಾ ಕಡೆಗಳಲ್ಲೂ ಜಾರಿಗೆ ತರಲು ಉದ್ದೇಶಿಸಿದೆಯೇ; ಹಾಗಿದ್ದರೆ ಯಾವಾಗ ?

ಉತ್ತರ : ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು) .— ಅ) ಹೌದು

ಆ)

ಸಾಲು	ತಾಲ್ಲೂಕುಗಳು	ನಿಗದಿಪಡಿಸಿದ ಹಣ ಲಕ್ಷ ರೂಗಳಲ್ಲಿ	ಗುರಿ ಸಾಧನೆ ಲಕ್ಷ ರೂಗಳಲ್ಲಿ.
1981–82	33	25	3.24
1982–83	85	100	6.36
1983–84	90	110	34.32

ಇ) ಇದು ಕೇಂದ್ರ ಸರ್ಕಾರದ ಯೋಜನೆ. ಅದರಂತೆ ರಾಜ್ಯಸರ್ಕಾರ ಜಾರಿಗೆ ತರುತ್ತದೆ.

ವಿಷಯ : ಕಡ್ಡಾಯ ಶಿಕ್ಷಣ ಯೋಜನೆ

ಪ್ರಶ್ನೆ : 119 (538) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ) .— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕಡ್ಡಾಯ ಶಿಕ್ಷಣವು ಯಾವಾಗ ಜಾರಿಗೆ ಬಂದಿತು ;

ಆ) ಕಡ್ಡಾಯ ಶಿಕ್ಷಣ ಯೋಜನೆಯಲ್ಲಿ ಈವರೆವಿಗೂ ಒಳಪಟ್ಟಿರುವ ಮಕ್ಕಳ ಸಂಖ್ಯೆ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಲ್ಲಿ ಯಶಸ್ವಿಯಾಗಿರುವ ಮಕ್ಕಳ ಶೇಖಡಾವಾರು ಮಾಹಿತಿ ;

ಇ) ಈ ಯೋಜನೆಯ ಕಾರ್ಯರೂಪಕ್ಕೆ ತರುವ ಅಧಿಕಾರಿ ಮತ್ತು ಅವರ ವಾರ್ಷಿಕ ವರದಿ ;

ಈ) ಈ ಯೋಜನೆಯನ್ನು ಉಲ್ಲಂಘಿಸಿದವರಿಗೆ ವಿರುದ್ಧ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು ;

ಉ) ಈ ಯೋಜನೆಯನ್ನು ಉಲ್ಲಂಘಿಸಿದ ಬಗ್ಗೆ ಎಷ್ಟು ಪ್ರಕರಣಗಳು ನೊಂದಾಯಿಸಲ್ಪಟ್ಟಿವೆ ಮತ್ತು ಅವುಗಳ ಫಲಿತಾಂಶ ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) .— ಅ) 1ನೇ ಜೂನ್ 1961 ರಿಂದ

ಯೋಜನೆಯ ವ್ಯಾಪ್ತಿಗೆ ಒಳಪಟ್ಟ ಮಕ್ಕಳ ಸಂಖ್ಯೆ	ಶೇಖಡಾವಾರು
1) 1981–82–32, 51, 008	96 o/o
2) 1982–83–33, 50, 009	96 o/o
3) 1983–84–34, 16, 826	95 o/o

ಇ) ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) 1983ರ ಜನಗಣತಿ ಯನ್ವಯ 34, 16, 826 ಮಕ್ಕಳ ಗಣತಿ ಮಾಡಲಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ಮಕ್ಕಳನ್ನು ಶಾಲೆಗೆ ದಾಖಲಾಗುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಈ) ಈ ಯೋಜನೆಯನ್ನು ಉಲ್ಲಂಘಿಸಿದವರಿಗೆ 25 ರೂಗಳಿವರೆಗೆ ಜುಲ್ಮಾನೆ ಹಾಕುವ ಕ್ರಮ ವಿತ್ತು. ಆದರೆ ಅದು 29-6.65 ರಿಂದ ಜಾರಿಯಲ್ಲಿಲ್ಲ.

ಉ) ಇಲ್ಲ

ವಿಷಯ : ಕೋಲಾರ ಜಿಲ್ಲೆ. ಶ್ರೀನಿವಾಸಪುರದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಸ್ಥಳಾವಕಾಶದ ಅಭಾವ

ಪ್ರಶ್ನೆ 120 (392) ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ) .— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸರ್ಕಾರೀ ಕಿರಿಯ ಕಾಲೇಜು, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಇಲ್ಲಿ ಸ್ಥಳಾವಕಾಶದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ ಈ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಉತ್ತರ : ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) .— ಅ) ಬಂದಿದೆ.

ಆ) ಹಣಕಾಸಿನ ಅಭಾವದಿಂದ ಈ ಕಾಮಗಾರಿಗೆ ಧನ ಸಹಾಯ ಒದಗಿಸಲು ಇದುವರೆಗೆ ಸಾಧ್ಯ ವಾಗಿಲ್ಲ. ಇನ್ನು ಮುಂದೆ ಇದನ್ನು ಪರಿಶೀಲಿಸಲಾಗುವುದು.

ವಿಷಯ : ವಾಣಿಜ್ಯ ವಿದ್ಯಾಭ್ಯಾಸದ ಪಠ್ಯ ಕ್ರಮಗಳ ಪರಿಷ್ಕರಿಸುವಿಕೆ.

ಪ್ರಶ್ನೆ : 122 (95) ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ) .— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟು ಉತ್ತರಿಸುವರೇ :—

ಅ) ವಾಣಿಜ್ಯ ವಿದ್ಯಾಭ್ಯಾಸದ ಪಠ್ಯ ಕ್ರಮಗಳನ್ನು ಪರಿಷ್ಕರಿಸಲು 1981ರಲ್ಲಿ ಸರ್ಕಾರವು ಸಮಿತಿಯನ್ನು ರಚಿಸಲಾಗಿದೆಯೇ ;

ಆ) ರಚಿಸಿದ್ದಲ್ಲಿ ಆ ಸಮಿತಿಯು ಶಿಫಾರಸ್ಸುಗಳೇನು ;

ಇ) ರಾಜ್ಯದಲ್ಲಿರುವ ವಾಣಿಜ್ಯ ವಿದ್ಯಾಭ್ಯಾಸದ ಕ್ರಮ ಪಠ್ಯಕ್ರಮಗಳಲ್ಲಿ ಬಹಳಷ್ಟು ಅಸಂಗತ ಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಈ) ಹಾಗಿದ್ದಲ್ಲಿ ಈ ಅಸಂಗತಗಳನ್ನು ಸರಿ ಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಉತ್ತರ : ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) .— ಅ) ಹೌದು

ಆ) ಅನುಬಂದ 'ಅ' ಲಗತ್ತಿಸಿದೆ.

ಇ) ಹೌದು

ಈ) ಸರ್ಕಾರದ ಪರಿಶೀಲನೆಯಲ್ಲಿದೆ

ಅನುಬಂಧ 'ಅ'

ಮುಖ್ಯವಾದ ಶಿಫಾರಸ್ಸುಗಳೇನೆಂದರೆ :

1) ಕಛೇರಿ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಹೊಸದಾಗಿ ರೂಪಿಸಿರುವ ಪ್ರಮಾಣ ಪತ್ರಗಳು (ಡಿಪ್ಲೊಮಾ) (1) ಕಛೇರಿಯ ಆಡಳಿತ (2) ಕಾರ್ಯದರ್ಶಿಗಳ ಕಾರ್ಯನಿರ್ವಹಣೆ ಮತ್ತು (3) ಮಾರಾಟಗಾರಿಕೆ ಮತ್ತು ಮಾರಾಟ ಮಾಡುವಿಕೆ ಇವುಗಳನ್ನು ಜಾರಿಗೆ ತರುವುದು.

2) ವಿವಿದೋದ್ದೇಶಗಳ ಮ್ಯಾನೇಜ್‌ಮೆಂಟ್ ಪಾಠಗಳನ್ನು ಬೆರಳಚ್ಚು ಮತ್ತು ಶೀಘ್ರಲಿಪಿ ಪಾಠ ಗಳಲ್ಲಿ ಬೆರೆಸಿ ಏಕರೂಪ ಪುಸ್ತಕಗಳನ್ನು ಹೊರತಂದು ವಾಣಿಜ್ಯ ಶಾಲೆಗಳಲ್ಲಿ ಜಾರಿಗೆ ತರುವುದರ ಮತ್ತು ವಿಭಾಗೀಯ ಮಟ್ಟದಲ್ಲಿ ಸರ್ಕಾರದಿಂದ 4 ಸೆಕ್ರೆಟೇರಿಯಲ್ ಮತ್ತು ಕಮರ್ಷಿಯಲ್ ಸ್ಟಡೀಸ್ ಸಂಸ್ಥೆ ಗಳನ್ನು ತೆಗೆಯುವುದು. ಈ ಸಂಸ್ಥೆಗಳಲ್ಲಿ ಆಧುನಿಕ ಕಛೇರಿ ಉಪಕರಣಗಳಲ್ಲಿ ಮತ್ತು ಥಿಯರಿ ಕೋರ್ಸು ಗಳಲ್ಲಿ ವಾಣಿಜ್ಯ ಶಾಲೆಯ ಮಕ್ಕಳಿಗೆ ಮತ್ತು ಇತರರಿಗೆ ತರಬೇತಿ ವಾಣಿಜ್ಯ ನೀಡುವುದು ವಿದ್ಯೆಯನ್ನು ಚೇತನಗೊಳಿಸಲು ಚರ್ಚಾಕೂಟಗಳನ್ನು ಏರ್ಪಡಿಸುವುದು.

3) ಆರ್ಥಿಕವಾಗಿ ಹಿಂದುಳಿದ ಮಕ್ಕಳು, ನಿಮ್ನವರ್ಗ, ನಿಮ್ನ ಜಾತಿ ಮತ್ತು ಹಿಂದುಳಿತ ವರ್ಗ ಗಳ ಮಕ್ಕಳ ಸಹಾಯಕ್ಕಾಗಿ ಸರ್ಕಾರದಿಂದ ಎಲ್ಲಾ ಜಿಲ್ಲೆಗಳಲ್ಲಿ ವಾಣಿಜ್ಯ ಶಾಲೆಗಳನ್ನು ತೆರೆಯುವುದು.

4) ರಾಜ್ಯದ ಒಳಗೂ ಮತ್ತು ಹೊರಗೂ ಇರುವ ಭಾರತ ಸರ್ಕಾರದ ಕಛೇರಿಗಳಲ್ಲಿ ಈ ರಾಜ್ಯದ ಯುವಜನರು ಕೆಲಸಗಳನ್ನು ಪಡೆಯಲು ಅನುಕೂಲವಾಗುವಂತೆ ಹಿಂದಿ ಬೆರಳಚ್ಚು ಮತ್ತು ಶೀಘ್ರಲಿಪಿ ಯನ್ನು ಜಾರಿಗೆ ತರುವುದು.

5) ಥಿಯರಿ ಕೋರ್ಸುಗಳಲ್ಲಿ ವಾಣಿಜ್ಯ ಶಾಲೆಗಳಲ್ಲಿ ಪಾಠ ಹೇಳಿಕೊಡಲು ಅನುದಾನ ಕೊಡು ವುದು.